**ದಿನಾಂಕ:21-10-2021ರಂದು ಬೆಳಗ್ಗೆ 11.30ಕ್ಕೆ ಮಾನ್ಯ ಶ್ರೀ ಎಂ.ಲಕ್ಷ್ಮೀನಾರಾಯಣ, ಅಧ್ಯಕ್ಷರು, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ ಇವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಸಭೆಯ ಸಭಾ ನಡವಳಿಗಳು.**

**ಹಾಜರಿ**

1. ಶ್ರೀ ಎಂ.ಲಕ್ಷ್ಮೀನಾರಾಯಣ - ಅಧ್ಯಕ್ಷರು
2. ಡಾ. ಎಂ.ಆರ್.ಏಕಾಂತಪ್ಪ - ನಿರ್ದೇಶಕರು, ರಾ.ಪಂ.ಸಂ.ಕೇ ಹಾಗೂ ಪಂ.ರಾಜ್ -2 ಮತ್ತು ಸದಸ್ಯ ಕಾರ್ಯದರ್ಶಿಗಳು

**ಆಹ್ವಾನಿತರು**

1. ಶ್ರೀ ಎಂ.ಕೆ.ಕೆಂಪೇಗೌಡ - ಸಲಹೆಗಾರರು ಪಂ.ರಾಜ್ ಹಾಗೂ ಜಂಟಿ ನಿರ್ದೇಶಕರು, ಸಮಾಜಿಕ ಪರಿಶೋಧನೆ

ಪ್ರಾರಂಭದಲ್ಲಿ ಸಮಿತಿಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳನ್ನು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಪ್ರಥಮ ಸಭೆಗೆ ಸ್ವಾಗತಿಸುತ್ತಾ, ಆಯೋಗದ ರಚನೆ, ಹಿನ್ನೆಲೆ, ಆಯೋಗದ ಪ್ರಕಾರ್ಯಗಳು ಹಾಗೂ ಆಯೋಗದ ಅಧಿಕಾರಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದರು. ಈ ಕೆಳಕಂಡ ಅಂಶಗಳ ಬಗ್ಗೆ ಕೂಡಲೇ ಕ್ರಮವಹಿಸುವಂತೆ ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿದರು.

1. ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಹಿಂದಿನ ಜನಗಣತಿಯ ಅಂಕಿಅಂಶಗಳನ್ನು ಹಾಗೂ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ನಡೆಸುವ ಸಂಬಂಧ ರಾಜ್ಯ ಚುನಾವಣಾ ಆಯೋಗವು ಕೈಗೊಂಡಿರುವ ಇದುವರೆಗಿನ ಕ್ರಮದ ವಿವರಗಳನ್ನು ರಾಜ್ಯ ಚುನಾವಣಾ ಆಯೋಗದಿಂದ ಪಡೆಯುವುದು.
2. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಕಛೇರಿಗಾಗಿ ಸ್ಥಳವನ್ನು ನೋಡುವುದು.
3. ಸೀಮಾ ನಿರ್ಣಯ ವಿಷಯದಲ್ಲಿ ಕರ್ತವ್ಯ ನಿರ್ವಹಿಸಿದ ರಾಜ್ಯ ಚುನಾವಣಾ ಆಯೋಗದ ಅಧಿಕಾರಿಯನ್ನು ಮುಂದಿನ ಸಭೆಗೆ ಆಹ್ವಾನಿಸುವುದು.
4. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇ-ಆಡಳಿತ ವಿಭಾಗದ ತಜ್ಞ ಅಧಿಕಾರಿಯನ್ನು ಮುಂದಿನ ಸಭೆಗೆ ಆಹ್ವಾನಿಸುವುದು.
5. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಸಭೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಪ್ರತಿ ವಾರ ನಡೆಸಲು ಕ್ರಮವಹಿಸುವುದು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಂ.ಲಕ್ಷ್ಮೀನಾರಾಯಣ)
ಅಧ್ಯಕ್ಷರು,
ಕರ್ನಾಟಕ ಪಂಚಾಯತ್ ರಾಜ್
ಸೀಮಾ ನಿರ್ಣಯ ಆಯೋಗ